# ಐಐಹೆಚ್‌ಆರ್‌ಯಿಂದ ಬಡ ರೈತರಿಗೆ ಅತ್ಯಾಧುನಿಕ ತ್ರಿಚಕ್ರ ವಾಹನ

Wednesday, December 9th, 2020 ವಿಶ್ವವಾಣಿ




**ತುಮಕೂರು:** ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಹಿರೇಹಳ್ಳಿ ವತಿಯಿಂದ ತುಮಕೂರು ನಗರದ ಶೆಟ್ಟಿಹಳ್ಳಿ ಬಳಿ ತರಕಾರಿ, ಹಣ್ಣು ವ್ಯಾಪಾರ ಮಾಡುವ ಕರ್ಣ ಎಂಬ ರೈತರಿಗೆ, ಐಐಹೆಚ್‌ಆರ್ ಸಂಸ್ಥೆ ಸಿದ್ಧಪಡಿಸಿರುವ ಅತ್ಯಾಧುನಿಕ ತಂತ್ರಜ್ಞಾನ ವನ್ನು ಒಳಗೊಂಡ ತ್ರಿಚಕ್ರ ವಾಹನವನ್ನು ವಿತರಿಸಲಾಯಿತು.

ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ವಿಶೇಷ ಘಟಕ ಯೋಜನೆಯಡಿ ಜಿಲ್ಲೆಗೆ ಮಂಜೂರಾಗಿದ್ದ ಎರಡು ತಾಜಾ, ಹಣ್ಣು ತರಕಾರಿ ಮಾರಾಟ ಮಾಡುವ ಸೋಲಾರ್ ವಿದ್ಯುತ್ ಸಂಪರ್ಕ ಇರುವ ವಾಹವನ್ನು ವಿತರಿಸಲಾಯಿತು .ವಾಹನ ವಿತರಿಸಿ ಮಾತನಾಡಿದ ಐಹೆಚ್‌ಆರ್‌ಸಿಯ ನಿರ್ದೇಶಕ ಡಾ.ಎನ್.ಆರ್.ದಿನೇಶ್, ಬಡ ರೈತರು ತಮ್ಮ ಹೊಲ, ಗದ್ದೆಗಳಲ್ಲಿ ಬೆಳೆದ ಹಣ್ಣು, ತರಕಾರಿಗಳು ಅತ್ಯಂತ ತಾಜಾ ರೀತಿಯಲ್ಲಿ ಗ್ರಾಹಕರು ಮಾರಾಟ ಮಾಡುವ ಮೂಲಕ ಹೆಚ್ಚು ಅದಾಯ ಗಳಿಸಲಿ ಎಂಬ ಉದ್ದೇಶದಿಂದ ಸಂಸ್ಥೆಯ ಹೊಸ ಮಾದರಿ ವಾಹನಗಳನ್ನು ಸಿದ್ದಪಡಿಸಿ,ಬಡ ರೈತರಿಗೆ ನೀಡುತ್ತಿದೆ ಎಂದರು.

ಐಐಹೆಚ್‌ಆರ್ ಸದಸ್ಯ ಶಿವಪ್ರಸಾದ್ ಮಾತನಾಡಿ,ಕೇಂದ್ರ ಸರಕಾರ ಕರ್ನಾಟಕ ರಾಜ್ಯಕ್ಕೆ ಅತ್ಯಾಧುನಿಕ ತಂತ್ರಜ್ಞಾನದಿಂದ ಸಿದ್ದಗೊಂಡಿರುವ ಸುಮಾರು 10 ತ್ರಿಚಕ್ರ ವಾಹನಗಳನ್ನು ನೀಡಿದೆ. ತುಮಕೂರು ಜಿಲ್ಲೆಗೆ ಎರಡು ನೀಡಿದ್ದು, ಒಂದನ್ನು ತುಮಕೂರು ನಗರದ ಶೆಟ್ಟಿಹಳ್ಳಿಯ ಬಳಿ ತರಕಾರಿ ವ್ಯಾಪಾರ ಮಾಡುವ ಕರ್ಣ ಎಂಬುವವರಿಗೆ, ಮತ್ತೊಂದನ್ನು ತುರುವೇಕೆರೆ ತಾಲೂಕಿನ ಮತ್ತೊಬ್ಬ ರೈತರಿಗೆ ನೀಡಲಾಗಿದೆ.

ಇದು ತಳ್ಳುವ ಗಾಡಿಗಿಂತ ಅತ್ಯಂತ ಬಿನ್ನವಾಗಿದ್ದು, 1.50 ಲಕ್ಷ ರೂಗಳಲ್ಲಿ ಸೂರ್ಯನ ಶಾಖವನ್ನು ಬಳಸಿಕೊಂಡು, ಹಣ್ಣು ಮತ್ತು ತರಕಾರಿಗಳಲ್ಲಿ ತೇವಾಂಶ ಇರುವಂತೆ ಕಾಪಾಡುವ ಮೂಲಕ ಗ್ರಾಹಕರಿಗೆ ತಾಜಾ ಇರುವಂತಹ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಲಾಗಿದೆ. ಇದೇ ಅಲ್ಲದೆ ಕೇಂದ್ರ ಸರಕಾರ ಹಲವಾರು ಹೊಸ ಯೋಜನೆಗಳನ್ನು ರೈತರಿಗೆ ನೀಡಿದೆ ಎಂದರು.

ವೇಳೆ ಭಾರತೀಯ ತೋಟಗಾರಿಕಾ ಸಂಸ್ಥೆ ಹಿರೇಹಳ್ಳಿಯ ಮುಖ್ಯಸ್ಥ ಡಾ.ಲೋಗಾನಂದನ್, 26ನೇ ವಾರ್ಡಿನ ನಗರಪಾಲಿಕಾ ಸದಸ್ಯ ಮಲ್ಲಿಕಾರ್ಜುನಯ್ಯ, ಮುಖಂಡರಾದ ಜೋತಿ, ಕಾವ್ಯ ಮತ್ತಿತರರು ಉಪಸ್ಥಿತರಿದ್ದರು.

http://vishwavani.news/iihr/